ಆ) ಸರ್ಕಾರದ ಆದೇಶದ ಸಂಖ್ಯೆ : ವಇ 32(ಎ) ಕೊಮಂಲೆ 2002 ಬೆಂಗಳೂರು ದಿನಾಂಕ : 27/3/2003 ರಂತೆ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿದ ನಂತರ ಆದ್ಯತೆ ಮೇಲೆ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗುತ್ತಿದೆ. ಒಟ್ಟು ಮಂಜೂರಾದ 26053 ಮನೆಗಳ ಪೈಕಿ 25863 ಮನೆಗಳ ನಿರ್ಮಾಣ ಕಾರ್ಯ ಮುಗಿದಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಇ) ಸ್ಥಳದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಇರುವುದರಿಂದ ಒಟ್ಟು 190 ಮನೆಗಳು ಪೂರ್ಣಗೊಂಡಿರುವುದಿಲ್ಲ. ಈ ಮನೆಗಳ ಮೊತ್ತ ರೂ.77.60 ಲಕ್ಷ ಬಾಕಿ ಉಳಿದಿರುತ್ತದೆ.

ಈ) 2005–06ನೇ ಸಾಲಿಗೆ ಒಟ್ಟು 8280 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ. ಪ್ರಾರಂಭಿಕ ಠೇವಣಿ ನೀಡಿರುವ 8280 ಫಲಾನುಭವಿಗಳಿಗೆ ಮನೆಗಳ ನಿರ್ಮಾಣ ಕೈಗೊಂಡು ಪೂರ್ಣಗೊಂಡ ಮೇಲೆ ಹಂಚಿಕೆ ಮಾಡಲಾಗುವುದು. ಈ ಸಾಲಿನಲ್ಲಿ ತೀರ್ಥಹಳ್ಳಿ ಪುರಪಂಚಾಯಿತಿಗೆ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿರುವುದಿಲ್ಲದ ಕಾರಣ ಬೇಡಿಕೆ ಇರುವುದಿಲ್ಲ.

ಉ) ಈ ಸಾಲಿನಲ್ಲಿ ಹಂತ 4 ರಲ್ಲಿ 3052 ಹಾಗೂ ಹಂತ 5 ರಲ್ಲಿ 3455 ಮನೆಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಮಂಜೂರಾತಿ ನೀಡಿ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ತೀರ್ಥಹಳ್ಳಿ ಪುರಪಂಚಾಯಿತಿಯ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿದಲ್ಲಿ ಆದ್ಯತೆ ಮೇರೆಗೆ ಮುಂದಿನ ಹಂತಗಳಲ್ಲಿ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.

4998 (5615) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟಿರುವ ಅಂದ್ರಹಳ್ಳಿ, ವಿದ್ಯಾಮಾನನಗರ, ಸೌಮ್ಯಕಾಲಿನಗರ, ಹೇರೋಹಳ್ಳಿ, ತಿಗಳರಪಾಳ್ಯ, ತುಂಗಾನಗರ ಇತ್ಯಾದಿ ಈ ಪ್ರದೇಶಗಳಲ್ಲಿ ಸುಮಾರು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವುದು ನಿಜವೇ;

2. ಹಾಗಿದ್ದರೆ, ಈ ಪ್ರದೇಶದ ಸುತ್ತ–ಮುತ್ತಲೂ ಎಲ್ಲಿಯೂ ಸರ್ಕಾರಿ ಹೆರಿಗೆ ಆಸ್ಪತ್ರೆ, ಅಥವಾ ಸರ್ಕಾರದ ಆಸ್ಪತ್ರೆಯು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3. ಈ ನಿಟ್ಟಿನಲ್ಲಿ ಸರ್ಕಾರವು ಗ್ರಾಮಾಂತರ ಬಡಜನರಿಗೆ ಅನುಕೂಲವಾಗುವ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಆಸ್ಪತ್ರೆಯನ್ನು ತೆಗೆಯಲು ಆಲೋಚಿಸಿದೆಯೇ;

4. ಹಾಗಿದ್ದಲ್ಲಿ, ಯಾವ ಪ್ರದೇಶದಲ್ಲಿ ಸ್ಥಾಪನೆಯನ್ನು ಮಾಡಲಾಗುವುದು; ಸ್ಪಷ್ಟವಾದ ವಿವರಗಳನ್ನು ನೀಡುವುದು ?

ಶ್ರೀ ಎನ್ . ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.:

1. ಅಂದ್ರಹಳ್ಳಿಯಲ್ಲಿ – 3029, ವಿದ್ಯಾಮಾನನಗರದಲ್ಲಿ – 1500, ಸೌಮ್ಯಕಾಳಿನಗರ – 2135, ಹೆರೋಹಳ್ಳಿ–3477, ತಿಗಳರಪಾಳ್ಯ – 2310, ತುಂಗಾನಗರ– 1298 ಜನಸಂಖ್ಯೆ ಇರುತ್ತದೆ.

2. ಈ ಪ್ರದೇಶದಲ್ಲಿ ಹೆರೋಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕವು ಕಾರ್ಯನಿರ್ವಹಿಸುತ್ತಿದೆ.

3. ಇಲ್ಲ.

4. ಅಂದ್ರಹಳ್ಳಿ, ವಿದ್ಯಾಮಾನನಗರ, ಸೌಮ್ಯಕಾಳಿನಗರ, ಹೇರೋಹಳ್ಳಿ, ತಿಗಳರಪಾಳ್ಯ, ತುಂಗಾನಗರ ಈ ಎಲ್ಲಾ ಪ್ರದೇಶಗಳು ಹೆರೋಹಳ್ಳಿ ಪ್ರಾಥಮಿಕ ಆರೋಗ್ಯ ಘಟಕಕ್ಕೆ 2 ರಿಂದ 6 ಕಿ.ಮಿ. ವ್ಯಾಪ್ತಿಯಲ್ಲಿರುವುದರಿಂದ ಹೊಸ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಅವಕಾಶವಿರುವುದಿಲ್ಲ.